ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. **808/2019**

ಪ್ರಾಸಾ **: 01**

| | | |
|---|---|---|
| ಹೆಸರು | : | ರಾದಾಕೃಷ್ಣ |
| ತಂದೆಯ ಹೆಸರು | : | ಲಿಂಗಪ್ಪ |
| ಪ್ರಾಯ | : | **53** ವರ್ಷ |
| ಉದ್ಯೋಗ | : | ಎ ಎಸ್ ಐ, ಪುತ್ತೂರು ಸಂಚಾರ ಠಾಣೆ |
| ವಾಸಸ್ಥಳ | : | ಪುತ್ತೂರು |

---

ದಿನಾಂಕಃ **20.08.2025** ರಂವರೆಗೆದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

---

ದಂಡ ಪ್ರಕ್ರಿಯಾ ಸಂಹಿತೆಯ ಕಲಂ **299** ರ ಅಡಿಯಲ್ಲಿ ಸಾಕ್ಷ್ಯ

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು **2019** ರಿಂದ **10.08.2025** ವರೆಗೆ ಬಂಟ್ವಾಳ ಗ್ರಾಮಾಂತರ ಪೊಲೀಸು ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿ ರುತ್ತೇನೆ.

ಈ ಪ್ರಕರಣದಲ್ಲಿ ಆರೋಪಿತನ ವಿರುದ್ದ ನ್ಯಾಯಾಲಯವು ನೀಡಿದ ದಂ. ಪ್ರ.ಸಂ. ಕಲಂ 82 ರ ಅಡಿಯಲ್ಲಿನ ವಾರಂಟನ್ನು ನಮ್ಮ ಠಾಣೆಯಿಂದ ಪಡೆದುಕೊಂಡು ದಿನಾಂಕ 10.10.2023 ರಂದು ಉದ್ಘೋಷಣೆಯನ್ನು ವಾರಂಟಿನಲ್ಲಿ ಕಾಣಿಸಿದ ವಿಳಾಸ ಅಂದರೆ ಬಂಟ್ವಾಳ ತಾಲೂಕು ಚೇಳೂರು ಗ್ರಾಮದ ಗ್ರಾಮ ಪಂಚಾಯತಿ ಕಚೇರಿಯ ಗೋಡೆಗೆ ಹಾಗೂ ಇತರ ಸಾರ್ವಜನಿಕ ಸ್ಥಳದಲ್ಲಿ ಅಂಟಿಸಿ ಜ್ಯಾರಿ ಮಾಡಿರುತ್ತೇನೆ. ಮಾನ್ಯ ನ್ಯಾಯಾಲಯದಿಂದ ನೀಡಲಾದ ದಂ. ಪ್ರ.ಸಂ. ಕಲಂ 82 ರ ಪ್ರೊಕ್ಲಮೇಶನ್ ವಾರಂಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು. ನಾನು ವಾರಂಟನ್ನು ಜ್ಯಾರಿ ಮಾಡಿದ ಬಗ್ಗೆ ಪಂಚನಾಮೆಯನ್ನು ಮಾಡಿದ್ದು ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಉದ್ಘೋಷಣೆಯನ್ನು ಜಾರಿ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ಸಲ್ಲಿಸಿದ ನಿವೇದನೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು.

ಮಾನ್ಯ ನ್ಯಾಯಾಲಯವು ಆರೋಪಿತನ ಆಸ್ತಿ ಜಪ್ತಿಗೆ ಸಂಬಂಪಟ್ಟಂತೆ ದಂ. ಪ್ರ.ಸಂ. ಕಲಂ 83 ರ ಅಡಿ ನೀಡಿರುವ ವಾರಂಟನ್ನು ನಾನು ಠಾಣಾಧಿಕಾರಿಗಳಿಂದ ಪಡೆದುಕೊಂಡು ನಮ್ಮ ಠಾಣಾಧಿಕಾರಿ ನೀಡಿದ ಪತ್ರವನ್ನು ಕಂದಾಯ ಅಧಿಕಾರಿಗಳಿಗೆ ತಲುಪಿಸಿರುತ್ತೇನೆ. ಅದಕ್ಕೆ ಉತ್ತರವಾಗಿ ಕಂದಾಯ ಅಧಿಕಾರಿ ಅವರು ಆರೋಪಿತನಿಗೆ ಚೇಳೂರು ಗ್ರಾಮದ ಸರ್ವೆ 81/2 ಡಿ ರಲ್ಲಿ 0.38.00 ಎಕರೆ ಎಮೀನಿಗೆ ಸಂಬಂದಿಸಿದಂತೆ ಪಹಣಿ ದಾಖಲಾಗಿರುವುದಾಗಿ ತಿಳಿಸಿ ದಿನಾಂಕ 10.06.2024 ರಂದು ಪತ್ರದ ಮೂಲಕ ತಿಳಿಸಿರುತ್ತಾರೆ. ಈ ಬಗ್ಗೆ ನಾನು ಠಾಣಾಧಿಕಾರಿಗಳಿಗೆ ವರದಿಯನ್ನು ನೀಡಿರುತ್ತೇನೆ.

ಮಾನ್ಯ ನ್ಯಾಯಾಲಯವು ನೀಡಿರುವ ವಾರಂಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಶಾನೆ ಪಿ -4 ಎಂದು, ತಹಶೀಲ್ದಾರ ಬಂಟ್ವಾಳರವರು ನೀಡಿರುವ ವರದಿಯನ್ನು ಹಾಗೂ ಪಹಣಿ ಪತ್ರವನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಶಾನೆ ಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ನಿವೇದನೆಯನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 6(ಎ) ಎಂದು ಗುರುತಿಸಲಾಯಿತು.

ಆರೋಪಿ ತಲೆಮರೆಸಿಕೊಂಡಿದ್ದು, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ